ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಇಲ್ಲ. ಬೈಲಹೊಂಗಲ ಖಾನಾಪುರ ಉಪ ನೋಂದಣಿ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಕಿತ್ತೂರು ವಿಧಾನಸಭಾ ಕ್ಷೇತ್ರದ ಗ್ರಾಮಗಳಿಗೆ ಸಂಬಂಧಪಟ್ಟಂತೆ ಕಳೆದ 3 ವರ್ಷಗಳಲ್ಲಿ ಸರಾಸರಿ 964 ಪತ್ರಗಳು ನೋಂದಣಿಯಾಗಿರುತ್ತವೆ. ಆದ್ದರಿಂದ ಹೊಸದಾಗಿ ಉಪ ನೋಂದಣಿ ಕಛೇರಿಯನ್ನು ತೆರೆಯುವುದು ಆರ್ಥಿಕ ದೃಷ್ಟಿಯಿಂದ ಸಮಂಜಸವಲ್ಲ.

ಆ) ಉದ್ಭವಿಸುವುದಿಲ್ಲ.

662 (582) ಶ್ರೀ ಸುರೇಶ್ ಎಸ್. ಮಾರಿಹಾಳ (ಕಿತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಐತಿಹಾಸಿಕ ಪರಂಪರೆಯುಳ್ಳ ಚನ್ನಮ್ಮ ಕಿತ್ತೂರಿನಲ್ಲಿ ವಿಶೇಷ ತಹಶೀಲ್ದಾರರು ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕಿತ್ತೂರನ್ನು ಪೂರ್ಣ ಪ್ರಮಾಣದ ತಾಲ್ಲೂಕನ್ನಾಗಿ ಘೋಷಿಸಲು ಸರ್ಕಾರ ಕೈಗೊಂಡ ಕ್ರಮವೇನು;

ಇ) ಹಾಗಿದ್ದಲ್ಲಿ, ಕಿತ್ತೂರನ್ನು ಪೂರ್ಣ ಪ್ರಮಾಣದ ತಾಲ್ಲೂಕನ್ನಾಗಿ ಘೋಷಣೆ ಮಾಡುವಲ್ಲಿ ತಾರತಮ್ಯ ಏಕೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಹೌದು, ಬರಿದಿದೆ.

ಆ) ರಾಜ್ಯದಲ್ಲಿನ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಪುನರ್‌ರಚನೆ ಮಾಡುವ ಸಂಬಂಧ ಸಾಧಕ ಬಾಧಕಗಳನ್ನು ಪರಿಶೀಲಿಸಲು ಈ ಕೆಳಕಾಣಿಸಿದ ಸಮಿತಿಗಳನ್ನು ರಚಿಸಲಾಗಿತ್ತು.

1) ಶ್ರೀ ಎಂ. ವಾಸುದೇವರಾವ್ ಆಯೋಗ.

2) ಶ್ರೀ ಬಿ.ಎಂ. ಹುಂಡೇಕರ್ ಸಮಿತಿ.

3) ಶ್ರೀ ಪಿ.ಸಿ. ಗದ್ದೀಗೌಡರ್ ಸಮಿತಿ

ಈ ಮೂರು ಸಮಿತಿಗಳು ಒಟ್ಟಾರೆ 30 ಹೊಸ ತಾಲ್ಲೂಕುಗಳ ರಚನೆಗೆ ಶಿಫಾರಸ್ಸು ಮಾಡಿರುತ್ತವೆ. ಕಿತ್ತೂರನ್ನು ತಾಲ್ಲೂಕು ಕೇಂದ್ರವನ್ನಾಗಿ ರಚಿಸುವ ಬಗ್ಗೆ ಶ್ರೀ ಹುಂಡೇಕರ್ ಹಾಗೂ ಶ್ರೀ ಗದ್ದೀಗೌಡರ್ ಸಮಿತಿಗಳು ಶಿಫಾರಸ್ಸು ಮಾಡಿರುತ್ತವೆ.

ರಾಜ್ಯದಲ್ಲಿನ ಕೆಲವು ದೊಡ್ಡ ತಾಲ್ಲೂಕುಗಳನ್ನು ವಿಂಗಡಿಸಿ ಪುನರ ರಚಿಸುವ ಸಂದರ್ಭದಲ್ಲಿ ಈ ಸಮಿತಿಗಳ ಶಿಫಾರಸ್ಸನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿ, ಹೊಸ ತಾಲ್ಲೂಕುಗಳನ್ನು ರಚಿಸುವಾಗ ಅದಕ್ಕೆ ತಗಲುವ ವೆಚ್ಚ ಮತ್ತು ಇತರೇ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಹೊಸ ತಾಲ್ಲೂಕುಗಳನ್ನು ರಚಿಸುವ ಬದಲು ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ವಿಶೇಷ ತಹಸೀಲ್ದಾರರ ನೇಮಕಾತಿ ಮಾಡಲು ತೀರ್ಮಾನಿಸಿ, ಕಿತ್ತೂರಿಗೆ ವಿಶೇಷ ತಹಸೀಲ್ದಾರರನ್ನು ನೇಮಕ ಮಾಡಲಾಗಿದೆ. ಅದರಂತೆ ಕಿತ್ತೂರನ್ನು ತಾಲ್ಲೂಕನ್ನಾಗಿ ರಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಇ) ಮೇಲೆ ನೀಡಲಾದ ಉತ್ತರದಿಂದ ಉದ್ಭವಿಸುವುದಿಲ್ಲ.